ಭಾರತದಲ್ಲಿ ಅದರಲ್ಲೂ ಕರ್ನಾಟಕದಲ್ಲಿ ಬೆಳೆಯುವ ಅಡಕೆ ಅತ್ಯಂತ ಸ್ವಾದಿಷ್ಟ ಹಾಗೂ ಆರೋಗ್ಯದಾಯಕ. ಇದಕ್ಕೆ ಬೇಡಿಕೆ ಭರ್ಜರಿ. ಆದಾಗ್ಯೂ, ವಿದೇಶಗಳಿಂದ ಅಡಕೆ ಕಳ್ಳಮಾರ್ಗದಲ್ಲಿ ಭಾರತವನ್ನು ಸೇರುತ್ತಿರುವುದು ಗಂಭೀರ ವಿಚಾರ. ಅಡಕೆಯನ್ನೇ ಬೆಳೆಯದ ಮರುಭೂಮಿ ರಾಷ್ಟ್ರ ಸಂಯುಕ್ತ ಅರಬ್ ಒಕ್ಕೂಟದಿಂದ ಹಡಗುಗಳ ಮೂಲಕ ಕಳ್ಳಡಕೆ ಸೇರುತ್ತಿರುವುದರ ಹಿಂದಿನ ಕಥೆಯೇನು?

# ಫಾರಿನ್ ಕಳ್ಳಡಕೆ

## ವಿದೇಶದ ಕಳ್ಳ ಮಾರ್ಗಗಳಿಂದ ಭಾರತಕ್ಕೆ ಅಡಕೆ ಪ್ರವೇಶ

ವಿಕ ಫೋಕಸ್




• ಯಳಸಾಡು ಮಂಜು

ಸರಕುಗಳನ್ನು ಹೊತ್ತ ಹಡಗೊಂದು ಇತ್ತೀಚೆಗೆ ಗಲ್ಫ್ ರಾಷ್ಟ್ರ ಯುಎಇಯಿಂದ ಮುಂಬಯಿನ ಬಂದರಿಗೆ ಬಂತು. ಅದರಲ್ಲಿ 'ಡಾಂಬರ್' ಎಂದು ಬರೆಯಲಾಗಿದ್ದ ದೊಡ್ಡ ಕಂಟೈನರ್‌ಗಳಿದ್ದವು. ತೈಲ ಹೊರ ತೆಗೆಯುವ ನೆಲದಿಂದ ಡಾಂಬರ್ ರಫ್ತು ಹೊಸತೇನೂ ಅಲ್ಲವಾದರೂ, ಯಾಕೋ ಸ್ಪೆಷಲ್ ಇಂಟೆಲಿಜೆನ್ಸಿ ಅಂಡ್ ಇನ್ವೆಸ್ಟಿಗೇಷನ್ ಬ್ರಾಂಚ್‌ನ (ಎಸ್‌ಐಐಬಿ) ಅಧಿಕಾರಿಗಳಿಗೆ ಅನುಮಾನ ಬಂದು ಅದನ್ನು ಪರೀಕ್ಷಿಸಿದರು. ತೆರೆದು ನೋಡಿದರೆ, 189.6 ಮೆಟ್ರಿಕ್ ಟನ್ ಅಡಕೆ! ಬರೋಬ್ಬರಿ 9.65 ಕೋಟಿ ರೂ. ಮೌಲ್ಯದ ಅಡಕೆ! ಅಷ್ಟಕ್ಕೂ ಈ ಕಳ್ಳಡಕೆ ಬಂದಿದ್ದು ಯುಎಇಯಿಂದ. ಆ ಮರುಭೂಮಿಯಲ್ಲಿ ಅಡಕೆ ಬೆಳೆದ ಪುಣ್ಯಾತ್ಮ ಯಾರು?

ಅಡಕೆಯನ್ನೇ ಬೆಳೆಯದ ದೇಶದ ಅಡಕೆಯನ್ನು ರಫ್ತು ಮಾಡಿದ್ದು ಇದೇ ಮೊದಲೇನಲ್ಲ, ಇದೇ ವರ್ಷದ ಫೆಬ್ರವರಿಯಲ್ಲಿಯೂ ಯುಎಇ ದೇಶದಿಂದ 83.352 ಮೆಟ್ರಿಕ್ ಟನ್ ಅಕ್ರಮ ಅಡಕೆಯು 'ಡ್ರೈಫ್ರೂಟ್ಸ್' ಹೆಸರಿನಲ್ಲಿ ಅಹಮದಾಬಾದ್ ತಲುಪಿತ್ತು. ಭದ್ರತಾ ಸಿಬ್ಬಂದಿ ತಪಾಸಣೆ ನಡೆಸಿದಾಗ ಈ ಕಳ್ಳ ವ್ಯಾಪಾರ ಬಯಲಾಗಿತ್ತು. ಇಂಡೋನೇಷ್ಯಾ, ಮಲೇಷ್ಯಾ, ಶ್ರೀಲಂಕಾ, ವಿಯೆಟ್ನಾಂನಂಥ ದಕ್ಷಿಣ ಏಷ್ಯಾದ ರಾಷ್ಟ್ರಗಳಿಂದ ಯುಎಇಗೆ ಅಡಕೆ ತಲುಪಿ, ಅಲ್ಲಿಂದ ಅಕ್ರಮವಾಗಿ ಭಾರತವನ್ನು ತಲುಪುತ್ತಿದೆ.

'ಅಡಕೆಯಲ್ಲಿ ಹೋದ ಮಾನ ಆನೆ ಕೊಟ್ಟರೂ ಬರದು' ಎಂಬುದು ನಮ್ಮ ಗಾದೆ ಮಾತು. ವಿದೇಶಗಳಿಂದ ದೇಶಕ್ಕೆ ನಾನಾ ಹೆಸರಲ್ಲಿ ಬಂದು ಬೀಳುತ್ತಿರುವ ಅಡಕೆ ಆಮದಿನ ಕಳ್ಳ ಮಾರ್ಗಕ್ಕೆ ಕಡಿವಾಣ ಬೀಳುತ್ತಲೇ ಇಲ್ಲ. ದೇಶ ಮತ್ತು ರಾಜ್ಯದ ರೈತರಿಗೆ ಪ್ರಮುಖ ದುಡ್ಡಿನ ಬೆಳೆಯೆಂದರೆ ಅಡಕೆ. ಪಾನ್ ಮಸಾಲ ಜಾತಿಯಲ್ಲಿ ಒಂದಾದ ಗುಟ್ಕಾಗೆ ಅಡಕೆಯೇ ಪ್ರಮುಖ ಕಚ್ಚಾ ವಸ್ತು. ಉತ್ಪಾದನೆಯಾಗುವ ಒಟ್ಟು ಅಡಕೆಯಲ್ಲಿ ಶೇ.80ಕ್ಕೂ ಹೆಚ್ಚು ಪಾಲು, ಅದರಲ್ಲೂ ಕರ್ನಾಟಕದ ಅಡಕೆ ಹೆಚ್ಚಿನ ಪಾಲು ಗುಟ್ಕಾ ಕಾರ್ಖಾನೆಗೆ ರವಾನೆಯಾಗುತ್ತದೆ.

ಅಡಕೆ ಬೆಲೆ ಹೆಚ್ಚಿದಂತೆ ವಿದೇಶಗಳಿಂದ ಅಗ್ಗದ ಅಡಕೆ ಕಳ್ಳಮಾರ್ಗದಲ್ಲಿ ದೇಶದ ಮಾರುಕಟ್ಟೆಗೆ ಬಂದು ಬೀಳುತ್ತಿದೆ. ಇದಕ್ಕೆ ಕಡಿವಾಣ ಸಾಧ್ಯವಾಗಿಲ್ಲ, ಅಡಕೆ ಬೆಳೆಯದ ದೇಶಗಳಿಂದಲೂ ಅಡಕೆ ಆಮದು ಆಗುತ್ತಿರುವುದು ಅಚ್ಚರಿಗಳಲ್ಲಿ ಒಂದಾಗಿದೆ. ಇದರಿಂದ ದೇಶ ಮತ್ತು ರಾಜ್ಯದಲ್ಲಿ ಅಡಕೆ ಬೆಲೆ ಸ್ಥಿರತೆಗೂ ಭಾರಿ ಪೆಟ್ಟು ಬಿದ್ದಿದೆ.

ವಿದೇಶಿ ವಿನಿಮಯದ ಒಪ್ಪಂದದ ಪ್ರಕಾರ, ಭೂತಾನ್‌ನಂಥ ಕೆಲವು ದೇಶಗಳಿಂದ ಒಂದಷ್ಟು ಅಡಕೆ ಕಾನೂನುಬದ್ಧವಾಗಿಯೇ ಭಾರತವನ್ನು ತಲುಪುತ್ತಿದೆ. ಆದರೆ, ಕಳ್ಳಮಾರ್ಗದ ಅಡಕೆಯ ಆಮದು ಪ್ರಮಾಣ ಇದಕ್ಕಿಂತ ದೊಡ್ಡ ಪ್ರಮಾಣದಲ್ಲಿದೆ ಎಂದು ರೈತರೇ ರೂಪಿಸಿಕೊಂಡಿರುವ ಅಡಕೆ ಮಾರಾಟ ಸಂಸ್ಥೆಗಳು ಆರೋಪಿಸುತ್ತಿವೆ. ಭಾರತದಲ್ಲಿ ಬೆಳೆಯುವ ಅಡಕೆ ಸತ್ವಯುತ, ಆರೋಗ್ಯಕಾರಿಯಾಗಿದ್ದರೂ, ವಿದೇಶಿ ಅಡಕೆಯ ಹಂಗೇಕೆ? ಇದು ಮಿಲಿಯನ್ ಡಾಲರ್ ಪ್ರಶ್ನೆ.

### ಭಾರತ ಅಡಕೆಯ ರಾಜ ಕಳ್ಳಡಕೆಯಿಂದ ಕರುನಾಡಿಗೇ ನಷ್ಟ!

ಪ್ರಪಂಚದಲ್ಲಿಯೇ ಅಡಕೆ ಬೆಳೆಯುವುದರಲ್ಲಿ ಭಾರತವೇ ರಾಜ. ಕರ್ನಾಟಕ, ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ, ಅಸ್ಸಾಂ, ಮೇಘಾಲಯ ರಾಜ್ಯಗಳಲ್ಲಿ ಅಡಕೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. 2022-23ರ ಮಾಹಿತಿ ಪ್ರಕಾರ, ದೇಶದಲ್ಲಿ 7.70 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಕೆ ಬೆಳೆಯಿದೆ.

- **ದೇಶದ ಅಡಕೆ ಬೆಳೆಯಲ್ಲಿ ನಮ್ಮ ಕರ್ನಾಟಕವೇ ಕಿಂಗ್. ಕಳೆದ 4 ವರ್ಷಗಳಲ್ಲಿ ರಾಜ್ಯದಲ್ಲಿ 4,52,650 ಹೆಕ್ಟೇರ್ ಅಡಕೆ ಬೆಳೆ ಜಾಸ್ತಿಯಾಗಿದ್ದು 2023ರ ಹೊತ್ತಿಗೆ ಹೊಸದಾಗಿ ಅಡಕೆ ನಾಟಿ ಸೇರಿ 73ಅ1650 ಹೆ. ಪ್ರದೇಶದಲ್ಲಿ ಅಡಕೆ ಬೆಳೆಯಿದೆ.**
- **ಈಶಾನ್ಯ ರಾಜ್ಯಗಳಲ್ಲಿ ಅಡಕೆ ಒಂದು ರೀತಿಯ ಕಾಡು ಉತ್ಪನ್ನ, ಆದರೆ, ಕರ್ನಾಟಕ ಸೇರಿ ದಕ್ಷಿಣ ರಾಜ್ಯಗಳಲ್ಲಿ ರೈತರು ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿ ಅಡಕೆ ತೋಟ ಮಾಡುತ್ತಿದ್ದಾರೆ. ಹಾಗಾಗಿ, ಅಡಕೆಗೆ ಬೆಲೆ ಇಲ್ಲದಿದ್ದರೆ ಕರ್ನಾಟಕ ರೈತರು ಹೆಚ್ಚು ನಷ್ಟಕ್ಕೆ ಸಿಲುಕಲಿದ್ದಾರೆ.**

### ಅಡಕೆಗೆ ಕೆಟ್ಟ ಹೆಸರು ತರಲು ಸಿಗರೇಟ್ ಕಂಪನಿಗಳ ಪ್ರಯತ್ನ

ಅಡಕೆ ಆರೋಗ್ಯಕ್ಕೆ ಹಾನಿಕಾರಕ ಎಂಬ ಕೆಟ್ಟ ಹೆಸರು ಬರಲು ದೇಶ, ವಿದೇಶಿ ಸಿಗರೇಟ್ ಕಂಪನಿಗಳ ಲಾಬಿ ದೊಡ್ಡಮಟ್ಟದಲ್ಲಿದೆ. ಈ ಕಂಪನಿಗಳು ಸರಕಾರದ ಮಟ್ಟದಲ್ಲೂ ಪ್ರಭಾವ ಬೀರುತ್ತವೆ ಎಂದು ರೈತರು, ಅಡಕೆ, ಸಹಕಾರ ಸಂಸ್ಥೆಗಳು ದೂರುತ್ತಿವೆ. ಅಡಕೆ ಹಾನಿಕಾರಕವಲ್ಲ, ಅದರಲ್ಲಿ ಔಷಧೀಯ ಗುಣಗಳಿವೆ ಎಂಬುದು ರೈತರ ಅಂಬೋಣ.

### ಮ್ಯಾನ್ಮಾರ್‌ನಿಂದ ಬುಟ್ಟಿಗಳಲ್ಲಿ ಗಡಿ ದಾಟಿಸ್ತಾರೆ, ಜೀಪ್‌ಗಳಲ್ಲಿ ಲೋಡ್‌ಗಟ್ಟಲೆ ಪ್ರವೇಶ!



ಅಕ್ರಮ ನುಸುಳುವಿಕೆ! ಪಶ್ಚಿಮ ಬಂಗಾಳ, ಮಣಿಪುರ, ಅಸ್ಸಾಂನ ಗಡಿಗಳಲ್ಲಿ ಭದ್ರತಾಪಡೆಗಳು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆ. ಆದರೆ, ಇದರಷ್ಟೇ ಗಂಭೀರ ಸಮಸ್ಯೆ ಅಡಕೆ ಕಳ್ಳಸಾಗಣೆಯದ್ದು! ನೆರೆಯ ಮ್ಯಾನ್ಮಾರ್‌ನಿಂದ ಬುಟ್ಟಿಗಳಲ್ಲಿ ಅಡಕೆ ಹೊತ್ತು ಭಾರತದ ಗಡಿ ದಾಟುವವವರ ಸೆರೆ ಪ್ರಕರಣ ಆಗಾಗ್ಗೆ ಸುದ್ದಿಯಾಗುತ್ತಲೇ ಇರುತ್ತದೆ. ಇನ್ನೂ ಕೆಲವೆಡೆ, ಲೋಡ್‌ಗಟ್ಟಲೆ ಅಡಕೆ ತುಂಬಿಸಿಕೊಂಡ ಜೀಪ್‌ಗಳು ಮಣ್ಣಿನ ರಸ್ತೆಗಳ ಕಳ್ಳ ಮಾರ್ಗಗಳ ಮೂಲಕ ಭಾರತದ ಗಡಿ ಪ್ರವೇಶಿಸುತ್ತವೆ. ''ವಿದೇಶಗಳಿಂದ ಅಕ್ರಮವಾಗಿ ಬರುವ ಅಡಕೆಗಳ ಲೆಕ್ಕ ಸಿಗುವುದಿಲ್ಲ, ಇದರಿಂದ ದೇಶಕ್ಕೆ ಯಾವ ಆದಾಯವೂ ಇಲ್ಲ, ಅಲ್ಲದೆ, ಬೆಳೆಗಾರರಿಗೂ ಭಾರಿ ನಷ್ಟ'' ಎನ್ನುತ್ತಾರೆ ಆರ್.ಎಂ. ರವಿ.

### ಅಡಕೆಗಳ ನಡುವೆ ಏನೀ ಅಂತರ..?



**ದೇಸಿ ಅಡಕೆ**

- ಬಣ್ಣ ರುಚಿ ಮತ್ತು ತೂಕ ಹೆಚ್ಚು
- ಉತ್ತಮ ಗುಣಮಟ್ಟ
- ಪಾನ್ ಮಸಾಲ ಬಳಕೆಗೆ ಅತ್ಯುತ್ತಮ.
- ಈ ಅಡಕೆ ಜಗಿದಾಗ ಚ್ಯುಯಿಂಗ್ ಗಮ್ ರೀತಿ ಆಗುತ್ತೆ. ಅದಕ್ಕೆ ಗುಟ್ಕಾ ಪಾನ್, ಮಸಾಲಗೆ ಸೂಕ್ತ.
- ಸಂಸ್ಕರಣೆ ವಿಧಾನದಿಂದ ಬಳಕೆಗೆ ಹೆಚ್ಚು ಯೋಗ್ಯ

**ವಿದೇಶಿ ಅಡಕೆ**

- ಗುಣ, ಬಣ್ಣ ರುಚಿ, ತೂಕಗಳೆಲ್ಲ ಕಡಿಮೆ.
- ಗುಣಮಟ್ಟ ಕಳಪೆ.
- ಅಡಕೆ ಸಂಸ್ಕರಣೆ ವಿಧಾನ ಸರಿಯಿಲ್ಲ, ಜನಬಳಕೆಗೆ ಸೂಕ್ತವಲ್ಲ,
- ಪಾನ್ ಮಸಾಲಗೆ ಸೂಕ್ತವಲ್ಲ, ಈ ಕಾರಣಕ್ಕೆ ವಿದೇಶಿ ಅಡಕೆಯನ್ನು ದೇಶಿ ಅಡಕೆ ಜತೆ ಮಿಕ್ಸ್ ಮಾಡ್ತಾರೆ.
- ಅಡಕೆ ಒಂದು ಕಾಡಂಚಿನ ಬೆಳೆ. ಒಂದು ರೀತಿ ಕಾಡು ಉತ್ಪನ್ನ.

**ಕಳ್ಳಮಾರ್ಗದಲ್ಲಿ ಅಡಕೆ ದೇಶಕ್ಕೆ ಆಮದಾಗುವುದನ್ನು ತಡೆಯಲು ಕ್ಯಾಂಪ್ಕೊ, ತುಮ್ಕೋಸ್, ಮ್ಯಾಮ್ಕೋಸ್, ಅಡಕೆ ಸಹಕಾರ ಮಂಡಳದಿಂದ ದಿಲ್ಲಿಗೆ ತೆರಳಿ ಸಂಬಂಧಪಟ್ಟ ಸಚಿವರಿಗೆ, ರಾಜ್ಯದ ಪ್ರಮುಖ ಸಂಸದರಿಗೆ ಕಳೆದ 5 ದಿನದ ಹಿಂದೆ ಮನವಿ ಸಲ್ಲಿಸಿ ಒತ್ತಾಯಿಸಿದ್ದೇವೆ. ಅಡಕೆ ಕಳ್ಳ ಆಮದು ನಿಂತರೆ ಬೆಲೆ ಸ್ಥಿರತೆಗೆ ಅನುಕೂಲ ಆಗಲಿದೆ.**

- **ಆರ್.ಎಂ. ರವಿ** ಅಧ್ಯಕ್ಷರು, ತುಮ್‌ಕೋಸ್

### ಈಗ ಎಲ್ಲೆಡೆ ಅಡಕೆ

ದಶಕಗಳ ಹಿಂದೆ ಅಡಕೆ ಕೇವಲ ಶಿವಮೊಗ್ಗ, ಉತ್ತರ ಕನ್ನಡ, ದಕ್ಷಿಣ ಕನ್ನಡಕ್ಕಷ್ಟೇ ಸೀಮಿತವಾಗಿತ್ತು. ಆದರೆ, ಈಗ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಅಡಕೆ ಮರಗಳ ನೆರಳು ಹಬ್ಬಿದೆ.

- **ಕರ್ನಾಟಕದಲ್ಲಿ ಅಡಕೆ ಬೆಳೆಯುವ ಟಾಪ್ ಜಿಲ್ಲೆಗಳು:** ದಾವಣಗೆರೆ, ಶಿವಮೊಗ್ಗ, ಚಿಕ್ಕಮಗಳೂರು, ಉತ್ತರಕನ್ನಡ, ದಕ್ಷಿಣ ಕನ್ನಡ, ಚಿತ್ರದುರ್ಗ, ತುಮಕೂರು, ಹಾಸನ.
- **ಅಡಕೆ ಬೆಳೆಯುವ ದೇಶಗಳು:** ಭಾರತ, ಮ್ಯಾನ್ಮಾರ್, ಇಂಡೋನೇಷ್ಯಾ, ಚೀನಾ, ಮಲೇಷ್ಯಾ, ಶ್ರೀಲಂಕಾ, ವಿಯೆಟ್ನಾಂ.

### ಭೂತಾನ್ ಅಡಕೆ ಭೂತ

ಹಿಂದಿನ ವರ್ಷವಿಡೀ ಭೂತಾನ್ ಅಡಕೆ ಭಾರತದ ಅಡಕೆ ಬೆಳೆಗಾರರಿಗೆ ಭೂತವಾಗಿ ಕಾಡಿತ್ತು. ಕೇಂದ್ರ ಸರಕಾರ ಭೂತಾನ್‌ನಿಂದ ಭಾರತಕ್ಕೆ 17 ಸಾವಿರ ಟನ್ ಅಡಕೆಯನ್ನು ಯಾವುದೇ ಸುಂಕವಿಲ್ಲದೆ ಆಮದು ಮಾಡಿಕೊಳ್ಳುವ ಒಡಂಬಡಿಕೆಯನ್ನು ಮಾಡಿಕೊಂಡಿದೆ. ಈ ಒಪ್ಪಂದ ಈಗಲೂ ಚಾಲ್ತಿಯಲ್ಲಿದೆ. ಇದು ಕಾನೂನು ಪರಿಧಿಯಲ್ಲಿ ನಡೆಯುವ ವ್ಯವಹಾರವಾದರೂ ಭಾರತದಲ್ಲಿ ಅಡಕೆ ಬೆಲೆ ಮೇಲೆ ಅಲ್ಪಮಟ್ಟಿಗೆ ಪರಿಣಾಮವಂತೂ ಬೀರುತ್ತದೆ. ಇದರ ಜತೆ ಕಳ್ಳ ಮಾರ್ಗದ ಅಡಕೆ ಗಾಯದ ಮೇಲೆ ಬರೆ ಇದ್ದಂತೆ.

### ಅಡಕೆ ಎಲ್ಲಿಗೆ ಹೋಗುತ್ತೆ?

- ಶೇ.95 ರಷ್ಟು ಗುಟ್ಕಾ, ಪಾನ್ ಮಸಾಲ.
- ಶೇ.5ರಷ್ಟು ಮಾತ್ರ ಜನ ಬಳಕೆ ಮತ್ತು ಸ್ವೀಟ್ ಅಡಕೆಗೆ ಬಳಕೆ.
- ಪೇಂಟ್ ತಯಾರಿಕೆಯಲ್ಲಿ ಅಡಕೆಯನ್ನು ಬಳಸುತ್ತಾರೆ ಎಂಬ ನಂಬಿಕೆಯಿದೆ. ಆದರೆ, ಆ ರೀತಿಯ ಉದ್ದಿಮೆಗಳೂ ಇಲ್ಲ,
- ಶುಭ ಕಾರ್ಯಗಳಿಗೆ ಅಡಕೆ ಬಳಕೆ ಕಡ್ಡಾಯ. ಹಿಂದೂ ಸಂಸ್ಕೃತಿಯಲ್ಲಿ ಮದುವೆಯಿಂದ ಹಿಡಿದು ಎಲ್ಲ ಶುಭ ಕಾರ್ಯಗಳೂ ಎಲೆ ಅಡಕೆ ಇಲ್ಲದೆ ನಡೆಯುವುದಿಲ್ಲ,

manjunath.lokanath@timesofindia.com

03-07-2024
V-karnataka Pg 02

For more information visit University Library Website
Web - uasbagrilibindia.org
E-mail- librarian@uasbangalore.edu.in

03-07-2024
S-karantaka Pg 08

# ಕೃಷಿ ಸಂಶೋಧನೆ

ಪ್ರಸಕ್ತ ಬಜೆಟ್‌ನಲ್ಲಿ ಕೃಷಿ ಸಂಶೋಧನಾ ಚಟುವಟಿಕೆ ಉತ್ತೇಜಿಸಲು ವಿಶೇಷ ಅನುದಾನ ನೀಡಬೇಕು. ಇದಕ್ಕೆ ಖಾಸಗಿ ಬಂಡವಾಳ ಹರಿದು ಬರುವಂತೆ ಮಾಡಬೇಕು ಎಂಬುದು ಕೃಷಿ ತಜ್ಞರ ಒತ್ತಾಯ. ರಸಗೊಬ್ಬರ ಸಬ್ಸಿಡಿ ಪರಿಷ್ಕರಿಸಬೇಕು. ಕೃಷಿ ಕ್ಷೇತ್ರ ಹವಾಮಾನ ವೈಪರೀತ್ಯದ ಬಾಧೆಯನ್ನು ತಾಳಿಕೊಳ್ಳುವಂತೆ ಮಾಡಲು ಅಗತ್ಯ ಮೂಲಸೌಕರ್ಯ ಅಭಿವೃದ್ಧಿಗೆ ಆದ್ಯತೆ ಅಗತ್ಯ. ಭಾರತೀಯ ಕೃಷಿ ಸಂಶೋಧನಾ ಮಂಡಳಿಗೆ(ಐಸಿಎಆರ್) ಬಜೆಟ್ ಅನುದಾನವನ್ನು ಈಗಿರುವ 9,500 ಕೋಟಿ ರೂದಿಂದ 20,000 ಕೋಟಿ ರೂಗೆ ಹೆಚ್ಚಿಸಬೇಕು. ಆಹಾರ ಹಣದುಬ್ಬರವನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಹಣ್ಣು, ತರಕಾರಿ ಹಾಗೂ ಆಹಾರ ಧಾನ್ಯ ಬೆಳೆಗಳ ಹೆಕ್ಟೇರ್‌ವಾರು ಕ್ಷೇತ್ರವನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು. ಇವುಗಳಿಗೆ ಯೋಗ್ಯ ದರ ಸಿಗುವಂತೆ ಮಾಡಬೇಕು. ಕೃಷಿ ಉತ್ಪನ್ನಗಳ ರಫ್ತು ಹೆಚ್ಚಿಸಲು ಅಪಿಡಾಕ್ಕೆ ಬಜೆಟ್‌ನಲ್ಲಿ ಈಗಿರುವ 81 ಕೋಟಿ ರೂ ಅನುದಾನವನ್ನು 400 ಕೋಟಿ ರೂಗೆ ಹೆಚ್ಚಿಸಬೇಕು ಎಂದು ಆಗ್ರಹಪಡಿಸಿದ್ದಾರೆ.

# ಕರಿಬೇವು ಬೆಳೆದು ದುಂಡಗಾದ ತಳಗೇರಿ

▪ ಸೂರ್ಯನಾರಾಯಣ ನರಗುಂದಕರ

ಅದು ಕೇವಲ ಒಂದು ಎಕರೆ ಜಮೀನು. ಅಲ್ಲಿ ಬೆಳೆದ ಕರಿಬೇವು ರೈತನಿಗೆ ವಾರ್ಷಿಕವಾಗಿ ಅರವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಆದಾಯ ತಂದುಕೊಟ್ಟಿದೆ. ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಮೇವುಂಡಿ ಗ್ರಾಮ ಪಂಚಾಯತ ವ್ಯಾಪ್ತಿಯ ಬರದೂರ ಗ್ರಾಮದ ರೈತನ ಯಶೋಗಾಥೆ ಇದು.

ಬರದೂರ ಗ್ರಾಮದ ರೈತ ಮೈಲೆಪ್ಪ ತಳಗೇರಿ ಒಂದು ಎಕರೆ ಜಮೀನಿನಲ್ಲಿ ಸಾಂಪ್ರದಾಯಿಕ ಜೋಳ,ಮೆಕ್ಕೆಜೋಳ,ಹೆಸರು ಬೆಳೆಯುತ್ತಿದ್ದರು. ಇದೇ ಒಂದು ಎಕರೆಯಲ್ಲಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿನ ಸಹಾಯಧನದಿಂದ ಕರಿಬೇವು ಬೆಳೆಯುವ ಮೂಲಕ ಆರ್ಥಿಕ ಸ್ವಾವಲಂಬನೆ ಕಂಡುಕೊಂಡಿರುವದು ಹಲವರ ಹುಬ್ಬೇರಿಸುವಂತೆ ಮಾಡಿದೆ.

ಮೊದಲಿಗೆ ಮೈಲೆಪ್ಪ ತಳಗೇರಿ ಕರಿಬೇವು ಬೆಳೆಯುವದಾಗಿ ಹೇಳಿದಾಗ ಅನೇಕರು ನಕ್ಕಿದ್ದರು. ಕೆಲವರಂತೂ ಒಂದು ಎಕರೆ ಜಮೀನಿನಲ್ಲಿ ಬರುವ ಕಾಳುಕಡಿಗಳನ್ನು ತೆಗೆದುಕೊಂಡು ತೆಪ್ಪಗಿರು. ಯಾವನರ ಅಧಿಕಾರಿ ಮಾತು ಕೇಳಿ ಇದ್ದದ್ದನ್ನು ಹಾಳು ಮಾಡಿಕೊಂಡು ಮಂದಿ ಮುಂದ ಕೈಯೊಡ್ಡುವಂತಹ ಪರಿಸ್ಥಿತಿ ತಂದಕೋಬ್ಯಾಡಾ. ದೊಡ್ಡ ಧಿಮಾಕು ಮಾಡಿ ಕರಿಬೇವು ಬೆಳೆಯಾಕ ಹೊಂಟಾನ ಎಂದು ಉಡಾಫೆ ಮಾಡಿದ್ದರು. ಅಂದು ಉಡಾಫೆ ಮಾಡಿದ್ದ ಜನರೇ ಇಂದು ತಮ್ಮ ಬಳಿ ಬಂದು ಕರಿಬೇವು ಬೆಳೆದರ ಅದನ್ನು ಯಾರೆಲ್ಲ ಖರೀದಿಸುತ್ತಾರೆ. ಕರಿಬೇವು ಬೆಳೆಯನ್ನು ಪರಸ್ಥಳಕ್ಕೂ ಕಳಿಸಬಹುದೇ?.ಪರಸ್ಥಳಕ್ಕೆ ಕಳಿಸಲು ಸರಕಾರ ಏನಾದರೂ ವ್ಯವಸ್ಥೆ,ಸಹಾಯ ಮಾಡುತ್ತದೆಯೇ? ಎಂದೆಲ್ಲ ಮಾಹಿತಿ ಪಡೆದು ಬೆನ್ನು ತಟ್ಟಿದ್ದಾರೆಂದು ಸಂ.ಕ.ಪ್ರತಿನಿಧಿ ಮುಂದೆ ಮೈಲೆಪ್ಪ ಸಂತಸ ವ್ಯಕ್ತಪಡಿಸಿದರು.



ಒಂದು ಎಕರೆ ಜಮೀನಿನಲ್ಲಿ ಬೆಳೆದ ಕರಿಬೇವು ಗದಗ ಜಿಲ್ಲೆಯ ಮುಂಡರಗಿ ತಾಲೂಕಿನ ಬರದೂರ ಗ್ರಾಮದ ರೈತ ಮೈಲೆಪ್ಪ ತಳಗೇರಿ ಅವರ ತಿಜೋರಿ ಭರ್ತಿಯಾಗುವಂತೆ ಮಾಡಿದೆ. ತಳಗೇರಿಯ ಯಶಸ್ಸಿನಿಂದ ನೂರಾರು ಸಣ್ಣ ರೈತರು ಈಗ ಕರಿಬೇವು ಬೆಳೆಯಲು ಮುಂದಾಗಿದ್ದಾರೆ.

ಕರಿಬೇವಿನ ಸಸಿಗಳ ಮಧ್ಯದಲ್ಲಿ ಮಿಶ್ರ ಬೆಳೆ ಪದ್ಧತಿಯಲ್ಲಿ ವಿವಿಧ ವಾಣಿಜ್ಯ ಬೆಳೆಗಳನ್ನು ಬೆಳೆದಿದ್ದೇನೆ. ಇದರ ಆದಾಯ ಪ್ರತ್ಯೇಕವಾಗಿ ಬರಲಿದೆ. ಜಮೀನಿನಲ್ಲಿ ಬೆಳೆದ ಕರಿಬೇವು ಮಾರುಕಟ್ಟೆಗಿಯಲ್ಲಿ ಪ್ರತಿ ಕೆಜಿಗೆ 30ರೂಪಾಯಿ ದರದಲ್ಲಿ ಮಾರಾಟವಾಗಿದೆ. ಕರಿಬೇವಿನ ಬೆಲೆ ಕಾಲಕಾಲಕ್ಕೆ ಏರುಮುಖವಾಗುವದರಿಂದ ಮುಂದಿನ ದಿನಗಳಲ್ಲಿ ಉತ್ತಮ ಆದಾಯ ನಿರೀಕ್ಷೆಯಿದೆ ಎಂದು ಹೇಳಿದರು.

**ಲಾಭ ಹೇಗೆ?**

ನರೇಗಾ ಯೋಜನೆಯಲ್ಲಿ ತೋಟಗಾರಿಕೆ ಬೆಳೆ ಬೆಳೆಯಲು ಕಳೆದ ಸಾಲಿನಲ್ಲಿ 1.20 ಲಕ್ಷ ಸಹಾಯಧನ ಪಡೆದು 800 ಕರಿಬೇವು ಸಸಿ ತಂದು ನೆಟ್ಟರು. ಆ ಸಸಿಗಳು ಕೆಲವೇ ತಿಂಗಳುಗಳಲ್ಲಿ ದೊಡ್ಡದಾಗಿ ಕರಿಬೇವು ಆದಾಯ ನೀಡುತ್ತಿದೆ. ಈಗ ಮೈಲೆಪ್ಪ ವಾರ್ಷಿಕವಾಗಿ ಐವತ್ತರಿಂದ ಅರವತ್ತು ಸಾವಿರ ಲಾಭದ ನಿರೀಕ್ಷೆಯಲ್ಲಿದ್ದಾರೆ. ಕರಿಬೇವು ಸಸಿ ಬೆಳೆದಂತೆ ಇಳುವರಿಯು ಅಧಿಕವಾಗಲಿದೆ. ಆದಾಯ ಕೂಡ ಹೆಚ್ಚಾಗಲಿದೆ. ಮೈಲೆಪ್ಪ ತಳಗೇರಿಯ ಸಾಹಸದಿಂದ ಪ್ರೇರೇಪಿತರಾಗಿ ಈಗ ತಾಲೂಕಿನ ನೂರಾರು ಜನ ಸಣ್ಣಪುಟ್ಟ ರೈತರು ತಮ್ಮ ಜಮೀನಿನಲ್ಲಿ ಕರಿಬೇವಿನಂತಹ ಬೆಳೆಗಳನ್ನು ಬೆಳೆಯಲು ಮುಂದೆ ಬಂದಿದ್ದಾರೆಂದು ಮೂಲಗಳು ತಿಳಿಸಿವೆ.

> ನರೇಗಾ ಯೋಜನೆಯಡಿಯಲ್ಲಿ ಸಹಾಯಧನ ಪಡೆದು ರೈತ ಮೈಲೆಪ್ಪ ಉತ್ತಮ ಆದಾಯ ಕಂಡಿರುವುದು ಸಂತಸ ತಂದಿದೆ. ಇದು ನರೇಗಾ ಯೋಜನೆ ಸದುಪಯೋಗಪಡಿಸಿಕೊಂಡು ಇತರ ರೈತರು ಮಿಶ್ರ ಬೇಸಾಯದ ಕ್ರಮದಿಂದ ಉತ್ತಮ ಆರ್ಥಿಕತೆ ಹೊಂದುತ್ತಿರುವದು ಶ್ಲಾಘನೀಯವಾಗಿದೆ.
>
> ▪ ವಿಶ್ವನಾಥ ಹೊಸಮನಿ
> ಕಾರ್ಯನಿರ್ವಾಹಕ ಅಧಿಕಾರಿಗಳು, ತಾಪಂ, ಮುಂಡರಗಿ

# ಕೆಂಪು ಮೆಣಸಿನಕಾಯಿ ಈಗ ಕಪ್ಪು

## ಕೈಗೆ ಬಂದ ತುತ್ತು ಬಾಯಿಗೆ ಬಾರದ ಪರಿಸ್ಥಿತಿ

▪ ಸಂಗ್ರಹಿಸಿಟ್ಟ ಮೆಣಸಿನಕಾಯಿ ಮಾರಲೂ ಆಗದೆ ಆರ್ಥಿಕ ಸಂಕಷ್ಟ

▪ 60,000 ರೂ. ಬೆಲೆ ಈಗ 6,000 ರೂ.ಗೆ ಇಳಿತ

**ಗದಗ:** ಐದು ತಿಂಗಳಿಂದ ಬೆಲೆ ಇಲ್ಲದ್ದೆ ರೈತರ ಮನೆಗಳಲ್ಲಿ ಹಾಗೂ ಹವಾನಿಯಂತ್ರಣ ಉಗ್ರಾಣದಲ್ಲಿ ಸಂಗ್ರಹಿಸಿಟ್ಟ ಕೆಂಪು ಮೆಣಸಿನಕಾಯಿ ಇಟ್ಟಲ್ಲಿಯೇ ಕಪ್ಪಾಗುತ್ತಿದ್ದು, ಗುಣಮಟ್ಟ ಕಳೆದುಕೊಂಡು ಹಾಳಾಗುವ ಮೂಲಕ ರೈತರಿಗೆ ಮತ್ತೊಂದು ಸಂಕಷ್ಟ ಎದುರಾಗಿದೆ. ಅಲ್ಪ ಸ್ವಲ್ಪ ಮಳೆಯಿಂದ ಮೆಣಸಿನಕಾಯಿ ಬೆಳೆದ ರೈತರಿಗೆ ಮೊದ ಮೊದಲು ಅಂದರೆ ಜನವರಿಯಲ್ಲಿ ಹುಬ್ಬಳ್ಳಿ, ಬ್ಯಾಡಗಿ, ಗದಗ ಮಾರುಕಟ್ಟೆಯಲ್ಲಿ ಕ್ವಿಂಟಲ್‌ಗೆ 50 ರಿಂದ 60 ಸಾವಿರ ರೂ. ದೊರೆತಿದೆ. ಆದರೆ ಫೆಬ್ರುವರಿ ಆರಂಭದಿಂದ ಈವರೆಗೂ ನಿರೀಕ್ಷಿತ ಬೆಲೆ ಕಾಣುತ್ತಿಲ್ಲ, ಕ್ವಿಂಟಲ್‌ಗೆ 60 ಸಾವಿರ ರೂ. ಇದ್ದ ಬೆಲೆಯು ಈಗ 6 ಸಾವಿರಕ್ಕೆ ಇಳಿದಿದೆ. ಇದರಿಂದ ಕೆಲ ರೈತರು ಮೆಣಸಿನಕಾಯಿ ಚೀಲಗಳನ್ನು ಮಾರುಕಟ್ಟೆಯಿಂದ ಮರಳಿ ತಂದು ಮನೆಯಲ್ಲಿಯೇ ಸಂಗ್ರಹ ಮಾಡಿದ್ದಾರೆ. ಬೆಲೆ ಬರಬಹುದು ಎಂಬ ಅವರ ನಿರೀಕ್ಷೆ ಫಲ ನೀಡಿಲ್ಲ. ಇದರೊಂದಿಗೆ ಇಟ್ಟಿದ್ದ ಮೆಣಸಿನ ಕಾಯಿ ಕಪ್ಪಾಗಿದ್ದು ಅದನ್ನು ತಿಪ್ಪೆಗೆ ಎಸೆಯುವಂತಾಗಿದೆ. ಕಳೆದ ಐದು ತಿಂಗಳಿಂದ ನಗರದ ಖಾಸಗಿ ಒಡೆತನದ ಕೋಲ್ಡ್ ಸ್ಟೋರೇಜ್‌ನಲ್ಲಿ ಒಣಮೆಣಸಿನಕಾಯಿ ದಾಸ್ತಾನು ಮಾಡಲಾಗಿದೆ. ಒಂದು ಚೀಲಕ್ಕೆ ಒಂದು ತಿಂಗಳಿಗೆ 30 ರೂ. ಶುಲ್ಕ ಕೊಡಬೇಕು. ಎರಡು ತಿಂಗಳು ನಂತರ ಉತ್ತಮ ಬೆಲೆ ಬರುವ ನಿರೀಕ್ಷೆ ಇದೆ. ಆದ್ದರಿಂದ ಐದು ತಿಂಗಳು ಕಳೆದರೂ ಯಾವುದೇ ರೀತಿಯ ಬೆಲೆ ಏರಿಕೆ ಕಾಣದ ಹಿನ್ನೆಲೆಯಲ್ಲಿ ಕೋಲ್ಡ್ ಸ್ಟೋರೇಜ್‌ನ ಶುಲ್ಕ ರೈತರಿಗೆ ಆರ್ಥಿಕವಾಗಿ ಹೊರೆಯಾಗುತ್ತಿದೆ.

03-07-2024
V-karantaka Pg 12

**ಹವಾಮಾನದ ದೃಷ್ಟಿಯಿಂದ ಎರಡು ಮಹತ್ವದ ಬೆಳವಣಿಗೆಗಳು. ವಾಡಿಕೆಗಿಂತ ಆರು ದಿನಗಳ ಮೊದಲೇ ನೈರುತ್ಯ ಮುಂಗಾರು ಇಡೀ ದೇಶವನ್ನು ವ್ಯಾಪಿಸಿದೆ. ಅಲ್ಲದೆ, ಜುಲೈ ತಿಂಗಳಲ್ಲಿ ವಾಡಿಕೆಗಿಂತ ಹೆಚ್ಚಿನ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಅಂದಾಜಿಸಿದೆ. ಉತ್ತಮ ಮಾನ್ಸೂನ್ ಸೂಚನೆ ಹಿನ್ನೆಲೆಯಲ್ಲಿ ದೇಶದ ರೈತರಿಂದ ಹಿಡಿದು ಆರ್ಥಿಕ ತಜ್ಞರವರೆಗೆ ಬಹುತೇಕರ ಮೊಗದಲ್ಲಿ ನಗು ಅರಳಿದೆ. ಏಕೆಂದರೆ, ಮಾನ್ಸೂನ್ ಎಂದರೆ ಬರೀ ಮಳೆಯಲ್ಲ! ನಮ್ಮ ದೇಶದ ಆರ್ಥಿಕತೆಯ ಚಾಲಕಶಕ್ತಿ. ಶ್ರೀಸಾಮಾನ್ಯರ ಜನಜೀವನ, ಕೃಷಿ, ಆರ್ಥಿಕತೆಯ ಬೆಳವಣಿಗೆ ಅಷ್ಟೇ ಅಲ್ಲ ರಾಜಕೀಯ ಸಮೀಕರಣಗಳು ಕೂಡ ಈ ಮಾನ್ಸೂನ್‌ನೊಂದಿಗೆ ಬೆಸೆದುಕೊಂಡಿವೆ.**

# ಮಾನ್ಸೂನ್ ಮಹಿಮೆ

ವಿ | ವಿ|ಶೇ|ಷ



**ಬದುಕನ್ನು, ದೇಶದ ಆರ್ಥಿಕತೆಯನ್ನು ಕಟ್ಟಿಕೊಡುವ ಮುಂಗಾರು ಮಳೆ**

**ಮುಂ**ಗಾರು ಮಳೆ! ಇದಿಲ್ಲದೆ ಏನೂ ಇಲ್ಲ. ನಮ್ಮೆಲ್ಲರ ಊಟದ ತಟ್ಟೆ ತುಂಬಬೇಕಾದರೆ ಮುಂಗಾರು ಸಕಾಲಕ್ಕೆ ಆಗಮಿಸಬೇಕು, ಅರ್ಭಟಿಸಬೇಕು. ಆಗಲೇ, ಕೃಷಿ ಚಟುವಟಿಕೆಗಳು ಗರಿಗೆದರುತ್ತವೆ, ಆಹಾರ ಉತ್ಪಾದನೆ ಗುರಿ ತಲುಪುತ್ತದೆ. ಬೆಲೆಯೇರಿಕೆ ನಿಯಂತ್ರಣಕ್ಕೆ ಬರುತ್ತದೆ. ಜಿಡಿಪಿ ಏರುಮುಖವಾಗುತ್ತದೆ. ಜನಸಾಮಾನ್ಯರ ಬದುಕಿನಲ್ಲಿ ನೆಮ್ಮದಿ ನೆಲೆಸುತ್ತದೆ.

ಹೌದು, ಈ ಬಾರಿ ಮುಂಗಾರು ಮೇ 30ರಂದು ಕೇರಳಕ್ಕೆ ಅಡಿಇಟ್ಟಿತ್ತು. ಕೆಲವೇ ದಿನಗಳಲ್ಲಿ ಅಂದರೆ ಜೂನ್ ಮೊದಲ ವಾರದಲ್ಲಿ ಕರ್ನಾಟಕ ಪ್ರವೇಶಿಸಿತು. ಕೊನೆಯ ಹಂತದಲ್ಲಿ ಮಂಗಳವಾರದಂದು, ರಾಜಸ್ಥಾನ, ಪಂಜಾಬ್ ಮತ್ತು ಹರಿಯಾಣ ರಾಜ್ಯಗಳನ್ನು ಪ್ರವೇಶಿಸುವ ಮೂಲಕ ಜುಲೈ 2ರಂದು ಮುಂಗಾರು ಇಡೀ ದೇಶವನ್ನು ವ್ಯಾಪಿಸಿದಂತಾಗಿದೆ.

**ಕಡಿಮೆ ಮಳೆ ಎಂದರೆ ಬೆಲೆಯೇರಿಕೆ, ಸಂಕಷ್ಟ**

ಸಾಮಾನ್ಯವಾಗಿ ಜುಲೈ 8ರಂದು ಮುಂಗಾರು ದೇಶಾದ್ಯಂತ ವ್ಯಾಪಿಸುತ್ತಿತ್ತು. ಈ ವರ್ಷ ಆರು ದಿನ ಮೊದಲೇ ವ್ಯಾಪಿಸಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಜುಲೈನಲ್ಲಿ ವಾಡಿಕೆಗಿಂತ ಹೆಚ್ಚು ಮಳೆಯಾಗುವ ನಿರೀಕ್ಷೆಯಿದ್ದು, ಭಾರಿ ಮಳೆಯಿಂದಾಗಿ ಪಶ್ಚಿಮ ಹಿಮಾಲಯದ ರಾಜ್ಯಗಳ ಮತ್ತು ದೇಶದ ಮಧ್ಯ ಭಾಗಗಳಲ್ಲಿರುವ ನದಿಗಳಲ್ಲಿ ನೀರಿನ ಮಟ್ಟ ಹೆಚ್ಚಳವಾಗಿ ಪ್ರವಾಹಕ್ಕೆ ಕಾರಣವಾಗಬಹುದು ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಜೂನ್‌ನಿಂದ ಸೆಪ್ಟೆಂಬರ್ ಅವಧಿಯಲ್ಲಿ ದೇಶಾದಲ್ಲಾಗುವ ಮಳೆಯಿಂದಲೇ (ಸೌತ್-ವೆಸ್ಟ್ ಮಾನ್ಸೂನ್) ಭಾರತದ ಶೇಕಡ 75ರಷ್ಟು ಜಲಬೇಡಿಕೆ ಪೂರ್ತಿಗೊಳ್ಳುತ್ತದೆ. ಮತ್ತು ಶೇಕಡ 50ಕ್ಕಿಂತ ಅಧಿಕ ಬೆಳೆಗಳು ಕಟಾವುಗೊಳ್ಳುತ್ತವೆ. ಹೆಚ್ಚು ನೀರು ಬೇಕಾಗುವ ಭತ್ತ, ಹತ್ತಿ, ಬೇಳೆಕಾಳು, ಸೊಯಾಬಿನ್ ಸೇರಿದಂತೆ ಹಲವು ಬೆಳೆಗಳು ಹೆಚ್ಚಾಗಿ ಮುಂಗಾರಿನ ಅವಧಿಯಲ್ಲೇ ಬರುತ್ತವೆ.



## ಜೂನ್‌ನಲ್ಲಿ ಹೇಗಿತ್ತು?

**ದೇಶದಲ್ಲಿ ಜೂನ್ ತಿಂಗಳಲ್ಲಿ ವಾಡಿಕೆಗಿಂತ ಶೇಕಡ 11ರಷ್ಟು ಕಡಿಮೆ ಮಳೆಯಾಗಿದೆ. ಈ ಮಳೆಕೊರತೆ ಕಳೆದ ಐದು ವರ್ಷಗಳಲ್ಲೇ ಹೆಚ್ಚು. ಜೂನ್ ತಿಂಗಳ ವಾಡಿಕೆ ಮಳೆ 165.3 ಮಿ.ಮೀ ಆಗಿದ್ದು, ಈ ಬಾರಿ ಸರಾಸರಿ 147.2 ಮಿ.ಮೀ. ಮಳೆಯಾಗಿದೆ. ಆದರೆ, ದಕ್ಷಿಣ ಭಾರತದಲ್ಲಿ ವಾಡಿಕೆಗಿಂತ ಶೇಕಡ 14ರಷ್ಟು ಹೆಚ್ಚು ಮಳೆ ಸುರಿದಿದೆ. ವಾಯವ್ಯ ಭಾರತದಲ್ಲಿ ಶೇ.33, ಕೇಂದ್ರ ಭಾರತದಲ್ಲಿ ಶೇ.14 ಹಾಗೂ ಪೂರ್ವ ಮತ್ತು ಈಶಾನ್ಯ ಭಾರತದಲ್ಲಿ ಶೇ.13ರಷ್ಟು ಮಳೆ ಕೊರತೆ ಉಂಟಾಗಿದೆ.**

## ಜಿಡಿಪಿಗೆ ನೇರ ಸಂಬಂಧ

| ವರ್ಷ | ಜಿಡಿಪಿ |
|---|---|
| 2017 | 6.8% |
| 2018 | 6.4% |
| 2019 | 3.8% |
| 2020 | -5.8% |
| 2021 | 9% |
| 2022 | 7% |
| 2023 | 7.2% |

**ಮುಂ**ಗಾರು ದುರ್ಬಲವಾಗಿದ್ದಲ್ಲಿ ಅದರ ನೇರ ಹೊಡೆತ ಆರ್ಥಿಕತೆಯ ಮೇಲೆ ಬೀಳುತ್ತದೆ. 2019ರಲ್ಲಿ ದೇಶ ಭೀಕರ ಬರಗಾಲಕ್ಕೆ ಸಾಕ್ಷಿಯಾಯಿತು. ಉತ್ತರ, ಪಶ್ಚಿಮ ಮತ್ತು ದಕ್ಷಿಣ ಭಾರತದ ಬಹುತೇಕ ರಾಜ್ಯಗಳಲ್ಲಿ ಮಳೆ ಇಲ್ಲದೆ ಕೃಷಿ ಚಟುವಟಿಕೆ ಸ್ತಬ್ಧಗೊಂಡವು. 2018ರಲ್ಲಿ ಶೇಕಡ 6.4ರಷ್ಟಿದ್ದ ಜಿಡಿಪಿ, ಅನಾವೃಷ್ಟಿಯ ಪರಿಣಾಮ 2019ರಲ್ಲಿ ಶೇ.3.8ಕ್ಕೆ ಕುಸಿಯಿತು. ಇದರ ಅಡ್ಡಪರಿಣಾಮ ದೇಶದ ಇತರ ವಲಯಗಳ ಮೇಲೂ ಆಯಿತು. ಮುಂಗಾರು ಆಶಾದಾಯಕವಾಗಿದ್ದರೆ, ದೇಶದ ಜಿಡಿಪಿ ಶೇಕಡ 2.5ರಿಂದ 3ರಷ್ಟು ಏರಿಕೆ ಕಾಣುವ ನಿರೀಕ್ಷೆ ಗರಿಗೆದರುತ್ತದೆ. ಹಾಗಾಗಿಯೇ, ಆರ್ಥಿಕ ತಜ್ಞರು ಜಿಡಿಪಿ ಭವಿಷ್ಯ ಹೇಳಬೇಕಾದರೆ ಹವಾಮಾನ ಇಲಾಖೆಯ ವರದಿಯನ್ನು, ಮಾನ್ಸೂನ್ ಕುರಿತಾದ ಎಲ್ಲ ವಿವರಗಳನ್ನು ಅವಲೋಕಿಸುತ್ತಾರೆ. 2017 ಮತ್ತು 2018ರಲ್ಲಿ ಮುಂಗಾರು ವಾಡಿಕೆ ಅನುಸಾರ ಸುರಿದಿದ್ದರಿಂದ ಜಿಡಿಪಿ ಕೂಡ ಏರಿಕೆ ಕಂಡಿತ್ತು ಎಂಬುದು ಗಮನಾರ್ಹ. 2020ರಲ್ಲಿ ಕೋವಿಡ್ ಪರಿಣಾಮ ಜಿಡಿಪಿ ಭಾರಿ ಕುಸಿತ ಕಂಡಿತು.

## ಕೃಷಿಗೆ ನವಚೈತನ್ಯ

ಮುಂಗಾರು ಮತ್ತು ಹಿಂಗಾರು ಮಳೆ ಇಲ್ಲದೆ ದೇಶದ ಕೃಷಿಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಅದರಲ್ಲೂ, ಬೇಳೆಕಾಳು, ಎಣ್ಣೆಕಾಳು ಹಾಗೂ ಇತರ ವಾಣಿಜ್ಯ ಬೆಳೆಗಳಿಗೂ ಮುಂಗಾರು ಮಳೆಯೇ ಪ್ರಶಸ್ತ. 2022-23ರ ಆರ್ಥಿಕ ಸಮೀಕ್ಷೆಯ ಪ್ರಕಾರ, ಭಾರತದ ಶೇಕಡ 65ರಷ್ಟು ಜನಸಂಖ್ಯೆ ಗ್ರಾಮಗಳಲ್ಲಿ ವಾಸಿಸುತ್ತಿದೆ. ದೇಶದ ಶೇಕಡ 47ರಷ್ಟು ಜನಸಂಖ್ಯೆ ಕೃಷಿ ಮೇಲೆ ಅವಲಂಬಿತವಾಗಿದೆ (ಕೆಲವೇ ದಶಕಗಳ ಮುನ್ನ ಈ ಸಂಖ್ಯೆ ಶೇ.70ರಷ್ಟಿತ್ತು). ಹೀಗಾಗಿ ಭಾರತದ ಸಮೃದ್ಧಿಗೆ ಅದರಲ್ಲೂ ಹಳ್ಳಿಗಳು ನೆಮ್ಮದಿಯಿಂದ ಇರಲು ಮಾನ್ಸೂನ್ ನವಚೈತನ್ಯದಂತೆ ಕಾರ್ಯನಿರ್ವಹಿಸುತ್ತಿದೆ. ಭಾರತೀಯ ರಿಜರ್ವ್ ಬ್ಯಾಂಕ್ (ಆರ್‌ಬಿಐ) ಪ್ರಕಾರ, ಜಿಡಿಪಿಯ ಶೇಕಡ 15 ಕೃಷಿ ಕ್ಷೇತ್ರವನ್ನೇ ಅವಲಂಬಿಸಿದೆ.

ಮಳೆಯ ಪ್ರಮಾಣ ಕಡಿಮೆಯಾದಾಗ ಅದರ ನೇರ ಪರಿಣಾಮ ಕೃಷಿ ಉತ್ಪಾದನೆಗಳ ಮೇಲಾಗುತ್ತದೆ. ಕೃಷಿಕರು ಮತ್ತು ಗ್ರಾಮೀಣವಾಸಿಗಳ ಹಣ ಖರ್ಚು ಮಾಡುವ ಶಕ್ತಿ ಕ್ಷೀಣಿಸುವುದರಿಂದ, ಆರ್ಥಿಕತೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟಾಗುತ್ತದೆ. ಮಳೆ ಕಡಿಮೆಯಾದಾಗ, ರೈತರು ಕೃಷಿ ಚಟುವಟಿಕೆಗಳ ಮೇಲಿನ ಖರ್ಚನ್ನು ಮತ್ತು ದೈನಂದಿನ ಜೀವನದ ವೆಚ್ಚವನ್ನೂ ತಗ್ಗಿಸಿಬಿಡುತ್ತಾರೆ. ಟ್ರ್ಯಾಕ್ಟರ್ ಹಾಗೂ ಇತರ ಆಧುನಿಕ ಕೃಷಿ ಸಲಕರಣೆಗಳಿಗೆ ಮಾಡುವ ಖರ್ಚನ್ನು ನಿಲ್ಲಿಸಿ, ಕೇವಲ ಅತ್ಯವಶ್ಯಕ ಚಟುವಟಿಕೆಗಳಿಗೆ (ಬಿತ್ತನೆ ಬೀಜ, ಕಳೆ ತೆಗೆಯುವುದುಮ ಗೊಬ್ಬರ ಇತ್ಯಾದಿ) ವೆಚ್ಚ ಮಾಡುತ್ತಾರೆ. ಪರಿಣಾಮ, ಕೃಷಿ ಕ್ಷೇತ್ರದಿಂದ ಆದಾಯ ಗಳಿಸುತ್ತಿದ್ದ ಇತರ ಕ್ಷೇತ್ರಗಳೂ ನಷ್ಟಕ್ಕೆ ದೂಡಲ್ಪಡುತ್ತವೆ.

ಹಾಗಾಗಿಯೇ, ಕೃಷಿ ಆರ್ಥಿಕತೆ ಎಂಬುದು ಬಹುವೈಶಾಲ್ಯದ ಮತ್ತ ಅಷ್ಟೇ ಶಕ್ತಿಶಾಲಿಯಾದ ಅಭಿವೃದ್ಧಿ ಸಾಧನ. ಆದರೆ, ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಬಾಹ್ಯಪ್ರಯತ್ನ ಎಷ್ಟೇ ಮಾಡಿದರೂ, ಅದರ ಸಂಪೂರ್ಣ ಪ್ರಯೋಜನ ಸಿಗುವುದು ಉತ್ತಮ ಮುಂಗಾರು ದೇಶಾದ್ಯಂತ ವ್ಯಾಪಿಸಿಕೊಂಡಾಗ ಮಾತ್ರ. ಕಳೆದ ವರ್ಷವಷ್ಟೇ ಕರ್ನಾಟಕ ಭೀಕರ ಬರವನ್ನು, ಅದರಿಂದ ಜಲಕ್ಷಾಮವನ್ನೂ ಎದುರಿಸಿದೆ. ಐಟಿ ಸಿಟಿ ಬೆಂಗಳೂರು 'ಟ್ಯಾಂಕರ್ ಸಿಟಿ' ಎಂಬ ದಯನೀಯ ಹಣೆಪಟ್ಟಿಯನ್ನು ಈ ಅವಧಿಯನ್ನು ಕಟ್ಟಿಕೊಳ್ಳಬೇಕಾಯಿತು. ಈ ವರ್ಷ ಉತ್ತಮ ಮುಂಗಾರು ಕಳೆದ ವರ್ಷದ ಕಹಿಯನ್ನು ಮರೆಸುವ ಭರವಸೆ ಮೂಡಿಸಿದೆ. ಅಲ್ಲದೆ, ಮುಂಗಾರು ದೇಶಾದ್ಯಂತ ವ್ಯಾಪಿಸಿಕೊಂಡಿರುವ ಹಿನ್ನೆಲೆಯಲ್ಲಿ ಮುಂಬರುವ ದಿನಗಳಲ್ಲಿ ಕೃಷಿ ಚಟುವಟಿಕೆಗಳು ಮತ್ತಷ್ಟು ವೇಗ ಪಡೆಯಲಿವೆ.

## ಬೆಲೆಯೇರಿಕೆಯ ಪೆಡಂಭೂತ

**ದೇ**ಶದಲ್ಲಿ 2019ರಲ್ಲಿ ವಾಡಿಕೆಗಿಂತ ಶೇಕಡ 33ರಷ್ಟು ಕಡಿಮೆ ಮಳೆಯಾದ ಪರಿಣಾಮ ಆದ ಹಾನಿ ಅಷ್ಟಿಷ್ಟಲ್ಲ. ಮುಂಗಾರು ವೈಫಲ್ಯದ ಹಿನ್ನೆಲೆಯಲ್ಲಿ ಬೆಲೆಯೇರಿಕೆ ಜನಸಾಮಾನ್ಯರ ಬದುಕನ್ನು ಹೈರಾಣಾಗಿಸಿತು. ಸಗಟು ಮಾರುಕಟ್ಟೆಯಲ್ಲೇ ಗೋಧಿಯ ಬೆಲೆ ಶೇಕಡ 7.5ರಷ್ಟು ಹೆಚ್ಚಾಗಿತ್ತು. 2018ರಲ್ಲಿ ಇದು ಶೇ.3ರ ಆಸುಪಾಸಿನಲ್ಲಿತ್ತು. 2021ರಲ್ಲಿ ಗೋಧಿಯ ದರ ಇಳಿಕೆ ಕಂಡಿತು. ಆದರೆ, 2022ರಲ್ಲಿ ದೇಶದ ಹಲವು ರಾಜ್ಯಗಳಲ್ಲಿ ವಾಡಿಕೆಗಿಂತ ಕಡಿಮೆ ಮಳೆ ಬಂದಿದ್ದರಿಂದ ಗೋಧಿಯ ದರ ಶೇ.14ರಷ್ಟು ಹೆಚ್ಚಿತು. ಇದು ಉದಾಹರಣೆಯಷ್ಟೇ. ಮಳೆ ಕಡಿಮೆಯಾದರೆ ಅಕ್ಕಿ, ಬೇಳೆಕಾಳು, ತರಕಾರಿ ಎಲ್ಲದರ ದರಗಳೂ ಏರುತ್ತವೆ. ಕೃಷಿ ಉತ್ಪನ್ನಗಳ ಉತ್ಪಾದನೆ ಕಡಿಮೆಯಾದರೆ ಸ್ವಾಭಾವಿಕವಾಗಿಯೇ ಆಹಾರಧಾನ್ಯಗಳ ಬೆಲೆ ಹೆಚ್ಚುತ್ತದೆ. ಇದರಿಂದ ಆಹಾರ ಹಣದುಬ್ಬರ ಪ್ರಮಾಣವೂ ಏರಿಕೆ ಕಂಡು, ಆರ್ಥಿಕತೆ ಹಲವು ಸವಾಲುಗಳೊಂದಿಗೆ ಹೋರಾಡಬೇಕಾಗುತ್ತದೆ. ಮುಂಗಾರು ವಿಫಲವಾದರೆ ಕಾಡುವ ಇನ್ನೊಂದು ದೊಡ್ಡ ಸಮಸ್ಯೆ ವಲಸೆಯದ್ದು. ಕೃಷಿ ಚಟುವಟಿಕೆಗಳು ಸ್ಥಭ್ಧವಾಗುವುದರಿಂದ ಹಳ್ಳಿಗರು ಕೆಲಸ ಹುಡುಕಿಕೊಂಡು ನಗರಗಳಿಗೆ ವಲಸೆ ಬರುತ್ತಾರೆ. ಮತ್ತು ಪೇಟೆಗಳಲ್ಲಿ ಜೀವನೋಪಾಯ ಕಂಡುಕೊಳ್ಳಲು ಪರದಾಡುತ್ತಾರೆ. ಇವರು ಸ್ವಗ್ರಾಮಗಳಿಗೆ ಮರಳುವುದು ಮತ್ತೆ ಮುಂಗಾರು ಆರ್ಭಟಿಸಿದ ಬಳಿಕವೇ.

## ಸರ್ಕಾರದ ಭವಿಷ್ಯ

**ಮಾ**ನ್ಸೂನ್ ಸಾಮಾನ್ಯವಾಗಿದ್ದರೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೂಡ ನಿಟ್ಟುಸಿರು ಬಿಡುತ್ತವೆ. ಒಂದು ವೇಳೆ ಮಳೆಯ ಕೊರತೆ ಕಾಡಿದರೆ, ಅದರಿಂದ ಆಹಾರ ಉತ್ಪಾದನೆ ಕಡಿಮೆಯಾಗಿ ರೈತರು ಸಂಕಷ್ಟಕ್ಕೆ ಸಿಲುಕುತ್ತಾರೆ. ಹಾಗಾಗಿ, ರೈತರ ನೆರವಿಗಾಗಿ (ಬಡ್ಡಿಮನ್ನಾ, ಸಾಲಮನ್ನಾ, ಇತರ ಆರ್ಥಿಕ ನೆರವು) ಭಾರಿ ಮೊತ್ತವನ್ನು ವೆಚ್ಚ ಮಾಡಬೇಕಾಗುತ್ತದೆ. ಮಾನ್ಸೂನ್ ಸಾಮಾನ್ಯವಾಗಿದ್ದ ಅವಧಿಯಲ್ಲಿ ಇದೇ ಮೊತ್ತವನ್ನು ಇತರ ಅಭಿವೃದ್ಧಿ ಯೋಜನೆಗಳಿಗೆ ವಿನಿಯೋಗಿಸಬಹುದು. ದೇಶದ ಶೇಕಡ 50ಕ್ಕಿಂತ ಅಧಿಕ ವರ್ಕ್‌ಫೋರ್ಸ್ ಕೃಷಿಗೆ ಸಂಬಂಧಿಸಿದ್ದು. ಹೀಗಾಗಿ, ಮಾನ್ಸೂನ್ ಬದಲಾವಣೆಯ ನೇರ ಪರಿಣಾಮ ಚುನಾವಣೆಯ ಮೇಲಾಗುತ್ತದೆ. ಹಿಂದೊಮ್ಮೆ, ದೆಹಲಿಯಲ್ಲಿ ಈರುಳ್ಳಿ ಬೆಲೆ ಏರಿಕೆಯಿಂದಾಗಿ ಸೃಷ್ಟಿಯಾದ ಅಸಮಾಧಾನದಿಂದಲೇ ಬಿಜೆಪಿ ಹಿರಿಯ ನಾಯಕಿ ದಿ.ಸುಷ್ಮಾ ಸ್ವರಾಜ್ ದೆಹಲಿ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಬೇಕಾಯಿತು. ಕರ್ನಾಟಕ ಸೇರಿ ಅನೇಕ ರಾಜ್ಯಗಳಲ್ಲಿ ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಗೆಲ್ಲಲು ರೈತರ ಸಾಲಮನ್ನಾ ಭರವಸೆಯನ್ನೇ ಅಸ್ತ್ರವಾಗಿಸಿಕೊಳ್ಳಬೇಕಾಯಿತು ಮತ್ತು ಅಧಿಕಾರಕ್ಕೆ ಬಂದ ಮೇಲೆ ಈ ಭರವಸೆ ಈಡೇರಿಸಲು ದೊಡ್ಡ ಮೊತ್ತವನ್ನು ವಿನಿಯೋಗಿಸಬೇಕಾಯಿತು.



## ಸಂಸ್ಕೃತಿಗೂ ಶೋಭೆ

**ನಮ್ಮ ಗ್ರಾಮೀಣ ಭಾಗದ ಆಚರಣೆಗಳು, ಬಹುತೇಕ ಹಬ್ಬಗಳು ಸುಗ್ಗಿಗೆ ಸಂಬಂಧಿಸಿದವುಗಳೇ. ಉತ್ತಮ ಮಳೆ-ಬೆಳೆಯಾದ ನಂತರ ಭಗವಂತನಿಗೆ ಕೃತಜ್ಞತೆಯನ್ನು ಸಮರ್ಪಿಸಿ, ಹಾಡಿಕುಣಿದು ನಲಿದಾಡುವ ರೈತಾಪಿ ವರ್ಗ, ಈ ಮೂಲಕ ಸಂಸ್ಕೃತಿಯ ಶಕ್ತಿಯನ್ನೂ ಹೆಚ್ಚಿಸುತ್ತಿದೆ. ಮುಂಗಾರು ಸಕ್ಸಸ್ ಆಗಿಬಿಟ್ಟರೆ ಗ್ರಾಮೀಣ ಭಾರತ ಹಲವು ಸಮಸ್ಯೆಗಳಿಂದ ಮುಕ್ತವಾಗುತ್ತದೆ. ಅಷ್ಟೇ ಅಲ್ಲ ಕೃಷಿ ಆರ್ಥಿಕತೆಯ ಮೂಲಕ ಸ್ವಾವಲಂಬನೆಯತ್ತಲೂ ದಾಪುಗಾಲು ಹಾಕುತ್ತದೆ.**

# Bengaluru natural ecology suffers from invasive paper mulberry



Paper Mulberry grown in the vacant space of Palace Grounds near Mehkri Circle. PHOTO BY RAGHU TENKAYALA

CHIRANJEEVI KULKARNI
BENGALURU, DHNS

Paper Mulberry (Broussonetia papyrifera), a plant classified as invasive, is spreading wildly in open spaces of Bengaluru, including in many lakes and parks, as lack of awareness about its ill effects has turned it into an ornamental plant.

The plant is believed to be a native species of Southeast Asia, was cultivated for making bark cloth and paper. Officials believe the plant entered India in the 1880s as part of horticulture and urban forestry.

The tree fruits twice a year with the pollen from its large flowers classified as highly allergic in several countries, including Taiwan, Pakistan and the US. In Taiwan, researchers who conducted tests termed it a "major aeroallergen" and showed a "consistently positive association between B. papyrifera pollen exposure and increased clinic visits for asthma".

In Bengaluru, the plant has taken over the open spaces -- be it parks, lakes or large campuses like the Indian Institute of Science and the areas near University of Agricultural Sciences. The unmanaged vacant spaces in palace grounds, railway stations in Malleswaram, Yeshwantpur and Hebbal and even the areas next to Forest Department's headquarters in Malleswaram have seen growth of huge paper mulberry groves.

Besides health impact, the spread of the plant has come at the cost of native species. Last year, researchers warned that invasive plants like Lantana camara have threatened about 66% of India's natural systems. However, the invasives in urban areas are yet to come under scanner.

"Urbanisation and change of natural habitat due to human intervention are responsible for the spread of invasive plants. It poses risks to indigenous plants in Chandigarh," said Daizy R Batish, professor at Department of Botany, Punjab University.

▸ Paper mulberry, Page 9

03-07-2024
Dec Hrd Pg 01

# B'luru natural ecology suffers from invasive paper mulberry

Paper mulberry, From Page 1

Raghu Tenkayala, a lawyer and urban ecology activist, said the BBMP and the Forest Department need to wake up urgently.

"I have seen people growing it as an ornamental shrub in apartments. This is because there is a lack of knowledge. If this invasion is not checked, protected areas next to Bengaluru like Bannerghatta National Park will face the threat," he said.

A N Yellappa Reddy, retired forest officer and environmentalist, said lack of a regulatory mechanism has led to import of invasive species as ornamental plants.

"The native species, especially those with medicinal values, have disappeared from the landscape of Bengaluru. Besides concretising open areas, urbanisation has led to import of invasive plants and there's nobody to monitor the situation. A committee of experts should assess the situation and issue directions on the plants permitted to be grown in a particular landscape," he said.

Deputy Conservator of BBMP Forest Cell B L G Swamy acknowledged the problem. "I have noticed the plants in several places. We will take necessary action," he said.

Principal Chief Conservator of Forests (Head of Forest Force) Brijesh Kumar Dikshit acknowledged the need for corrective action.

"Research has shown that it is the biggest invasive species threatening the flora of Pakistan. The plant grows by root cuttings as well as seeds and is a major water guzzler. The solution is in uprooting the plants and replacing them with native saplings. We will issue necessary directions in this regard," he said.

03-07-2024
Viswavani Pg 12

ಫಲಾಮೃತ

# ರುಚಿ-ಪೋಷಕಾಂಶಗಳ ಆಗರ ಸೀತಾಫಲ





**ಪುರುಷೋತ್ತಮ್ ವೆಂಕಿ** ಚಿತ್ರದುರ್ಗ

ಬೆಲೆ ಹೆಚ್ಚಿದ್ದರೂ ಜನರು ಉತ್ಸಾಹದಿಂದ ಸೀತಾಫಲ ಹಣ್ಣು ಖರೀದಿಸಲು ಕಾರಣವೆಂದರೆ ಅದರ ಸಿಹಿ ರುಚಿ ಮತ್ತು ಹಲವಾರು ಪೋಷಕಾಂಶಗಳು. ಇದರಲ್ಲಿ ಆ್ಯಂಟಿಆಕ್ಸಿಡೆಂಟ್ ಹೇರಳವಾಗಿದ್ದು ನಮ್ಮ ದೇಹದಲ್ಲಿರುವ ವಿಷಕಾರಿ ಅಂಶಗಳನ್ನು ಹೊರಹಾಕುತ್ತದೆ. ಆದ್ದರಿಂದ ನಾವು ವಿವಿಧ ಕಾಯಿಲೆಗಳಿಗೆ ಒಳಗಾಗುವುದನ್ನು ತಡೆಯುತ್ತವೆ.

ಸೀತಾಫಲ ಹಣ್ಣಿನಲ್ಲಿ ವಿಟಮಿನ್ ಸಿ ಇದ್ದು ಇದು ತುಂಬಾ ಪ್ರಯೋಜನಕಾರಿಯಾಗಿದೆ. ಅಲ್ಲದೆ ಪೊಟ್ಯಾಸಿಯಮ್ ಮತ್ತು ಮೆಗ್ನೀಸಿಯಮ್ ನಮ್ಮ ಹೃದಯವನ್ನು ರಕ್ಷಿಸುತ್ತದೆ. ಅದಕ್ಕಾಗಿಯೇ ಈ ಹಣ್ಣಿಗೆ ಯಾವಾಗಲೂ ಬೇಡಿಕೆಯಿದೆ. ಇದರಲ್ಲಿರುವ ಮೆಗ್ನೀಶಿಯಂ ನಮ್ಮ ದೇಹದಲ್ಲಿನ ನೀರಿನ ಮಟ್ಟವನ್ನು ನಿಯಂತ್ರಿಸುತ್ತದೆ. ಇದು ಕೀಲುಗಳಲ್ಲಿನ ಆಮ್ಲಗಳನ್ನು ಹೊರಹಾಕುತ್ತದೆ. ಸಂಧಿವಾತವನ್ನು ನಿವಾರಿಸಲು ಸಹಕಾರಿ. ಆಲಸ್ಯ ಮತ್ತು ಸುಸ್ತಾಗಿದ್ದರೆ ತಕ್ಷಣ ಸೀತಾಫಲ ವನ್ನು ಸೇವಿಸಿ. ಇದರಲ್ಲಿರುವ ಪೊಟಾಶಿಯಂ ನಿಮ್ಮ ಸ್ನಾಯುಗಳ ದೌರ್ಬಲ್ಯವನ್ನು ಕಡಿಮೆ ಮಾಡಿ, ಶಕ್ತಿ ನೀಡುತ್ತದೆ.

ರಕ್ತಹೀನತೆಯಿಂದ ಬಳಲುತ್ತಿರುವವರು ಸೀತಾಫಲವನ್ನು ತಿನ್ನಬೇಕು. ಏಕೆಂದರೆ ಇದು ಹೆಚ್ಚಿನ ಕ್ಯಾಲೋರಿಗಳನ್ನು ಹೊಂದಿರುತ್ತದೆ. ಇದರಲ್ಲಿರುವ ನೈಸರ್ಗಿಕ ಸಕ್ಕರೆ (ಸುಕ್ರೋಸ್) ತುಂಬಾ ಆರೋಗ್ಯಕರ. ಅಸ್ತಮಾದಿಂದ ಬಳಲುತ್ತಿರುವವರಿಗೆ ಸೀತಾಫಲ ತಿನ್ನುವುದು ಒಳ್ಳೆಯದು. ಇದರಲ್ಲಿರುವ ವಿಟಮಿನ್ ಬಿ6 ಅಸ್ತಮಾವನ್ನು ನಿಯಂತ್ರಿಸುವುದು.

ಸೀತಾಫಲ ಹಣ್ಣು ಗರ್ಭಿಣಿಯರು ತಿನ್ನಲೇಬೇಕಾದ ಹಣ್ಣು. ಹೆರಿಗೆ ಸಮಯದಲ್ಲಿ ನೋವನ್ನು ತಡೆಯುವ ಗುಣ ಈ ಹಣ್ಣಿನಲ್ಲಿದೆ. ಆದ್ದರಿಂದ ಮಧುಮೇಹ ಇರುವವರು ಸಹ ಸೀತಾಫಲವನ್ನು ತಿನ್ನಬಹುದು. ಇದರಲ್ಲಿ ಡಯೆಟರಿ (ಜೀರ್ಣವಾಗುವ) ಫೈಬರ್ ಅಧಿಕವಾಗಿದೆ ಇದು ಸಕ್ಕರೆ ಮಟ್ಟವನ್ನು ನಿಯಂತ್ರಿಸುತ್ತದೆ. ಟೈಪ್-2 ಮಧುಮೇಹದ ಮತ್ತಷ್ಟು ಬೆಳವಣಿಗೆಯನ್ನು ತಡೆಯುತ್ತದೆ. ತೂಕ ಇಳಿಸಿಕೊಳ್ಳಲು ಸಹ ಈ ಹಣ್ಣು ಸಹಾಯಕಾರಿ. ಇದರಲ್ಲಿರುವ ನಿಯಾಸಿನ್, ಫೈಬರ್ ಕೊಲೆಸ್ಟ್ರಾಲ್ ಮಟ್ಟವನ್ನು ಕಡಿಮೆ ಮಾಡುತ್ತದೆ. ಹಾಗಾಗಿ ದರ ಹೆಚ್ಚಿದ್ದರೂ ಖರೀದಿಸಿ ತಿನ್ನುವುದು ಉತ್ತಮ.

ಸೀತಾಫಲ ಹಣ್ಣಿನಿಂದ ಏನೆಲ್ಲಾ ಲಾಭಗಳಿವೆ ಎಂದು ತಿಳಿಯಿತು ಅಲ್ವಾ? ಹಾಗಾದ್ರೆ, ಇನ್ನು ಮುಂದೆ ತಿಂಗಳಿಗೆ ನಾಲ್ಕು ಬಾರಿ ಆದ್ರೂ, ಈ ಹಣ್ಣನ್ನು ತಿನ್ನಿ. ವೈದ್ಯರಿಂದ ದೂರವಿರಿ.